ಸಹನೆ ಇರುವುದಿಲ್ಲ. ಅವರೆಲ್ಲ ಸಂಜೆಯಾಗುವುದನ್ನೇ ಕಾಯುತ್ತಿದ್ದು ಇಲ್ಲಿಗೆ ಓಡಿ ಬಂದಿರುತ್ತಾರೆ. ನಶೆಯ ಆಕಾಂಕ್ಷಿಗಳಿಗೆಲ್ಲ ನಿಶೆಯೆಂದರೆ ಪರಮಪ್ರೀತಿ. ಹಗಲ ನಿಚ್ಚಳ ಬೆಳಕಿನಲ್ಲಿ ಅವರು ನೀರಿನಿಂದ ತೆಗೆದ ಮೀನಿನಂತೆ ವಿಲಿವಿಲಿ ಒದ್ದಾಡುತ್ತಾರೆ. ಸಂಜೆಯಾಗುವುದನ್ನೇ ಕಾಯುತ್ತಿದ್ದು ಇಲ್ಲಿಗೆ ಧಾವಿಸುತ್ತಾರೆ. ಮೊದಲ ಸಿಪ್ ಕುಡಿದ ನಂತರವೇ ಅವರ ಧಾವಂತ ಕಡಿಮೆಯಾಗುವುದು. ಆಮೇಲೆ ಶಾಂತವಾಗುವ ಅವರ ಜೀವ ನಿಧಾನವಾಗಿ ಇಹದ ಜಂಜಾಟಗಳಿಂದ ಸಂಪರ್ಕ ಕಡಿದುಕೊಳ್ಳುತ್ತ ಹೋಗುತ್ತದೆ. ಹೆಂಡತಿ–ಮಕ್ಕಳು, ಕಷ್ಟ–ಕಾರ್ಪಣ್ಯ, ಸಾಲ–ಸೋಲ, ಸೋಲು–ಅಪಮಾನ ಮುಂತಾದ ವರ್ತಮಾನದ ಸವಾಲುಗಳು ಸ್ಮರಣೆಯ ಪುಟಗಳಿಂದ ಎಗರುತ್ತ ಹೋದಂತೆಲ್ಲ ಅವರು ಹಗುರಾಗುತ್ತಾರೆ. ಆಮೇಲೆ ಅವರ ಸಿಟ್ಟು–ಅಸಹನೆಗಳೆಲ್ಲ ಇಳಿದು ಸಾವಿನಷ್ಟೇ ಶಾಂತಿ ಆವರಿಸುತ್ತದೆ.

ಭೋರ್ಗರೆವ ಸಾಗರದ ಅಪ್ಪಳಿಸುವ ಅಲೆಗಳ ತೆಕ್ಕೆಯಲ್ಲಿ ಒದ್ದೆಯಾಗುತ್ತಿರುವ ಕರಿಬಂಡೆಗಳ ಮೇಲೆ ತನ್ನ ಕೊನೆಯ ಕಿರಣಗಳನ್ನು ಚೆಲ್ಲಿ ಸುಸ್ತಾದ ದಿನಕರನಿಗೀಗ ನಿದ್ದೆ ಮಾಡುವ ಆತುರ. ನೀಲಿಯಾಕಾಶವೆಲ್ಲ ಕೆಂಪಾಗಿ, ಕಿತ್ತಳೆಯಾಗಿ, ತುಸುತುಸುವೇ ಕಪ್ಪಗಾಗುತ್ತಿರುವ ಕ್ಷಣದಲ್ಲಿ ಮೆಲ್ಲಗೆ ಕಣ್ಣುಬಿಟ್ಟು ನೋಡುತ್ತಿದ್ದಾನೆ ಚಂದಿರ. ಮುರಿದ ಬೆಳ್ಳಿಯ ಕೋಡುಬಳೆಯಂತೆ ಹೊಳೆಯುತ್ತಿರುವ ಅವನಿಂದ ತುಸು ದೂರದಲ್ಲಿ ಮಿನುಗುತ್ತಿರುವ ನಕ್ಷತ್ರ. ದಂಡೆಯ ಮರಳಗುಪ್ಪೆಯಲ್ಲಿ ಮನೆ ಕಟ್ಟಿಕೊಂಡ ಹುಡುಗರ ಹೋ ಎಂಬ ಕೇಕೆ ಮುಗಿಲು ಮುಟ್ಟುತ್ತಿದೆ. ಉಕ್ಕುಕ್ಕಿ ಅಬ್ಬರಿಸುವ ಅಲೆಗಳಿಗೆ ಕತ್ತಲಾದಂತೆ ಅದನೋ ಆವೇಶ ತುಂಬಿಕೊಂಡು ರಭಸ ಹೆಚ್ಚುತ್ತಿದೆ. ಪುಟ್ಟ ಮಕ್ಕಳ ಗೂಡು ಕೊಚ್ಚಿಕೊಂಡು ಹೋಗಿದ್ದೇ ತಡ ಅವರು ಒಟ್ಟಾಗಿ ಕೂಗುತ್ತಿದ್ದಾರೆ. ತೂತು ಬಿದ್ದ ಹಳೆಯ ದೋಣಿಯೊಂದು ಒಂಟಿಯಾಗಿ ಮಗುಚಿ ಬಿದ್ದಲ್ಲಿಯೇ ಆಕಾಶ ನೋಡುತ್ತಿದೆ. ಯಾರಿಗೂ ಕಾಣದ ಮರೆಯೆಂದು ದೋಣಿಗೊರಗಿ ಕೂತ ಪ್ರೇಮಿಗಳು ಕತ್ತಲು ಕವಿದದ್ದೇ ತೆಕ್ಕೆಬಿದ್ದು ಆವೇಶಗೊಂಡಿದ್ದಾರೆ. ಉನ್ಮತ್ತ ಅಲೆಗೆ ಸವಾಲು ಹಾಕುವಂತೆ ಅವರ ಬೆರಳುಗಳು ಅನ್ವೇಷಣೆಗಿಳಿದಿವೆ. ಪಕ್ಕದಲ್ಲೇ ಬಿದ್ದ ಬ್ಯಾಗಿನೊಳಗೆ ಸೈಲೆಂಟ್ ಮೋಡಿನಲ್ಲಿರುವ ಹುಡುಗಿಯ ಮೊಬೈಲು ಬಾಯಿ ಸತ್ತ ಮೂಕ ಹಕ್ಕಿಯಂತೆ ಗಂಟಲೊಳಗೇ ಒರಲಿ ಒರಲಿ ನರಳುತ್ತಿದೆ. ಮನೆಗೆ ಬಾರದ ಮಗಳಿಗಾಗಿ ಗಾಬರಿಯಿಂದ ತಲ್ಲಣಿಸುವ ತಾಯಿ, ಫೋನೆತ್ತದ ಮಗಳು ಬಸ್ಸಿನ ರಶ್ಶಿನಲ್ಲಿ ಒದ್ದಾಡುತ್ತಿದ್ದಾಳೇನೋ ಎಂದು ಮರುಕದಿಂದ ಕಣ್ಣೊರೆಸಿಕೊಂಡಿದ್ದಾಳೆ. ಬೋಳಾದ ಕತ್ತು, ಕಿವಿ, ಹಣೆಗಳ ಆಕೆಯ ದೈನ್ಯ ಬಿಂಬ ನೋಡಲಾರದೇ ಅವಳು ತೊಳೆಯುತ್ತಿದ್ದ ತಾಟು ಕೈ ಜಾರಿ ಢಣಢಣ ಉರುಳಿದೆ. ಆಕೆಯ ಅಜಾಗರೂಕತೆಗೆ ಬಾಯಿಗೆ ಬಂದಂತೆ ಬೈಯುತ್ತ, ಜೋರು ಮಾಡುತ್ತ ಹೊರಬಂದ ಯಜಮಾನಿ ಆಗಸದ ಹೊಳೆವ ಚಂದ್ರನನ್ನು ಕಂಡಿದ್ದೇ ಬೈಗುಳ ಮರೆತು ಚೌತಿ ಯಾವಾಗ ಎಂದು ಲೆಕ್ಕ ಹಾಕಿದ್ದಾಳೆ, ಖುಷಿಯಿಂದ ಸಿಳ್ಳೆ ಹಾಕುತ್ತ ಸುಳಿಸುಳಿ ಬೀಸಿದ ತುಂಟಗಾಳಿಯೊಂದು ಯಜಮಾನಿಯ, ಕೆಲಸದಾಕೆಯ ಸೆರಗುಗಳನ್ನು ಏಕಕಾಲದಲ್ಲಿ ಕೆಳಗೆ ಬೀಳಿಸಿದೆ. ಅಯ್ಯೊ ಎನ್ನುತ್ತ ಇಬ್ಬರೂ ಸೆರಗು ಸಂಭಾಳಿಸಿಕೊಳ್ಳಲು ಪರದಾಡುವಾಗ ಸಮಾನತೆ ಸಾಧಿಸಿದ ನೆಮ್ಮದಿಯಿಂದ ಗಾಳಿ ಕಡಲಿನತ್ತ ಓಡಿದೆ. ಅಖಂಡ ಕತ್ತಲಿನ ಮಂಡಲವೊಂದು ಭೂಮಿಯನ್ನಾವರಿಸುವ ದೃಢತೆಯಿಂದ ದಾಪುಗಾಲಿಕ್ಕುತ್ತ ಬರುತ್ತಿದೆ. ಇನ್ನು ನಾಳಿನ ತನಕ ತಿರೆಯ ಮೋರೆಯ ತುಂಬ ಕರಿಮಾಯಿಯ ಸೆರಗು ಸರಿಯುವುದಿಲ್ಲ.

ಕತ್ತಲು ಭೂಮಿಗಿಳಿದಂತೆಲ್ಲ ಸಂಜೆಯ ರಾಗ ಅಡಗುತ್ತ ಹೋಗುತ್ತದೆ. ಮತ್ತಿನ್ನು ಬೆಳಕಿನ ಮುಖ ನೋಡಬೇಕೆಂದರೆ ಇಡೀ ರಾತ್ರಿ ಮುಗಿಯಬೇಕು. ಕತ್ತಲೆಯ ಹೆಬ್ಬಂಡೆಯನ್ನು ಅವುಡುಗಚ್ಚಿ ಭಾರ ಸಹಿಸಿ ಉರುಳಿಸಿದ ಮೇಲೆ ನಸುಕಿನ ಬೆಳಕು ಭೆಟ್ಟಿಯಾಗುತ್ತದೆ. ಹಗಲಿನ ಬೆಳಕಿನ ನಿಚ್ಚಳವಿಲ್ಲದ, ಹಾಗಂತ ಕಾಳ ಕತ್ತಲೆಯ ಕುರುಡುತನವೂ ಅಲ್ಲದ, ಅರೆ ಮಬ್ಬಿನ ಮುಸ್ಸಂಜೆಗೆ ಅದರದ್ದೇ ವಿಶಿಷ್ಟ ಒನಪಿದೆ, ಹೊಳಪಿದೆ. ಆಸ್ವಾದಿಸುವ ಮನಸ್ಸಿದ್ದರೆ ಮುಗಿಯದ ಮಾಯಾ ಮೋಹದ ಸೊಬಗಿದೆ.

●